

## ಪ್ರಾಮಿಸ್, ಪ್ಲೀಸ್...

# ಮೋರೇ ಮೂರು ಮಾತು!

**ನಿರೂಪಣೆ: ಮಹತಿ**



ಪ್ರಿಯ ಬಂಧು,

ಒಕ್ಕಣೆಯ ಸಂದರ್ಭದಲ್ಲೇ ಮಾತು ಕುಂಟುತ್ತಿದೆ. ಆತ್ಮಬಂಧು ಎನ್ನುವಾಸೆ. ಆದರೆ, ಆತ್ಮದ ಕುರಿತು ನೀನು ಚರ್ಚೆಗೆ ಬಿದ್ದರೆ ನನ್ನ ಆಯುಸ್ಸೇ ಸಾಲದಾಗಬಹುದೆನ್ನುವ ಭಯ. ಹಾಗಾಗಿ ಬಂಧು ಎಂದಷ್ಟೇ ಕರೆಯುತ್ತಿರುವೆ. ಕ್ಷೇಮವೆ ಎಂದು ಕೇಳುವಾಸೆ. ಹಾಗೆ ಕೇಳಲೂ ಬಾಯಿ ಕಟ್ಟುತ್ತಿದೆ. ಕೊರೊನಾದ ಹೊಸ ಚಿಗುರುಗಳು ನನ್ನೊಂದಿಗೇ ಕಣ್ಣುಬಿಡುತ್ತ ಬಲಿಯುತ್ತಿರುವಾಗ ಕುಶಲವೇ ಎಂದು ಕೇಳುವುದೂ ವ್ಯಂಗ್ಯವೆನ್ನಿಸಬಹುದು, ಕ್ರೌರ್ಯವಾಗಬಹುದು.

ಸಂಬೋಧನೆಗಳ ಮಾತಿರಲಿ. ವಿಷಯಕ್ಕೆ ಬರೋಣ. ನನ್ನಂಥ ಅಂಬೆಗಾಲಿನ ಪ್ರತಿ ವರ್ಷವನ್ನೂ ನೀನು–ನಿನ್ನವರು ಹೊಸ ವರ್ಷವೆಂಬ ಹೆಸರಿನಲ್ಲಿ ಖುಷಿಯಿಂದ ಎದುರುಗೊಂಡ ಇತಿಹಾಸವನ್ನು ನಾನು ಬಲ್ಲೆ. ಆದರೆ, ಕ್ಯಾಲೆಂಡರ್‌ನ ಕೊನೆಯ ಪುಟವನ್ನು ಮಗುಚಿ ಬೀಳ್ಕೊಡುವಾಗ, ಷರಾ ಬರೆಯುವಾಗ ಸಂಭ್ರಮದ ಸುಳಿವೇ ಇಲ್ಲ – ಇರುವುದೆಲ್ಲ ಅಳಲು ಕೊರತೆ ದೂರು ದುಮ್ಮಾನಗಳ ಪಟ್ಟಿಯೇ ಎನ್ನುವುದನ್ನೂ ಬಲ್ಲೆ. 'ಸುಧಾ' ವರ್ಷಾಂತ್ಯ ಸಂಚಿಕೆ ನನ್ನ ಕಣ್ಣಿಗೂ ಬಿದ್ದಿದೆ. ಅದರಲ್ಲಿ ಸಂಕಲನಗೊಂಡಿರುವ 2021ರ ಇಪ್ಪತ್ತೊಂದು ಬಿಂಬಗಳಲ್ಲಿ ಕೊಸರಿಗೆ ಒಂದೆರಡು ಹೊರತುಪಡಿಸಿದರೆ ಉಳಿದವುಗಳೆಲ್ಲವೂ ಕ್ಷೋಭೆಯ ಸಂಗತಿಗಳೇ. ಹಾಗಾಗಿಯೇ, ಈಗ ನಿನ್ನ ಬೆಚ್ಚನೆ ಸ್ವಾಗತದ ಪುಳಕವನ್ನು ಅನುಭವಿಸುವಾಗಲೂ ಭವಿಷ್ಯದಲ್ಲಿನ ವಿದಾಯದ ವಿಷಣ್ಣ ಚಿತ್ರಗಳೇ ನನ್ನ ಮನಸ್ಸಿನಲ್ಲಿ ತುಂಬಿವೆ.

ನನಗೊಂದು ಆಸೆ. ಹನ್ನೆರಡು ತಿಂಗಳುಗಳ ನಂತರ ನಿನ್ನಿಂದ ಬೀಳ್ಕೊಡುವಾಗ ನನ್ನ ಮೋರೆಯಲ್ಲಿ ಸಾರ್ಥಕತೆಯ ಮಂದಹಾಸ ಉಳಿದಿರಬೇಕು. ವಿಷಣ್ಣ ನಗೆಗೆ ತುಟಿಗಳಲ್ಲಿ ಅವಕಾಶ ದೊರೆಯದಿರಬೇಕು. ಹಾಗೆ ಆಗಲೆಂದು